ಅನಂತರ ಗೂಡನ್ನು ಸೀಳಿಕೊಂಡು ಹೊರಬಂದು ಮುಕ್ತವಾಗಿ ಹಾರಾಡುತ್ತದೆ. ಅದು ತನ್ನ ಗೂಡಿನಲ್ಲೇ ಉಳಿದುಬಿಟ್ಟರೆ ನಾಶವಾಗುತ್ತದೆ. ಆದ್ದರಿಂದಲೇ ವಿವೇಕಾನಂದರು, "ಒಂದು ಸಂಪ್ರದಾಯದಲ್ಲಿ ಹುಟ್ಟುವುದು ಒಳ್ಳೆಯದು, ಆದರೆ ಅದರಲ್ಲೇ ಸಾಯುವುದು ಶೋಚನೀಯ" ಎಂದು ಹೇಳುತ್ತಾರೆ; "ನಾವು ಮಾನವಕೋಟಿಯನ್ನು ವೇದ, ಬೈಬಲ್, ಖುರಾನುಗಳ ಆಚೆಗೆ ತೆಗೆದುಕೊಂಡು ಹೋಗಬೇಕು" ಎಂದು ಕರೆಕೊಡುತ್ತಾರೆ.

ನಾವು ಶಾಸ್ತ್ರಗಳನ್ನು ಮೀರಿ ಬೆಳೆಯಬೇಕು ಎಂದ ಮಾತ್ರಕ್ಕೆ ಅಶಾಸ್ತ್ರೀಯವಾಗಿ, ವಿಧಿನಿಷೇಧಗಳಾವುವೂ ಇಲ್ಲದೆ ಸ್ವೇಚ್ಛಾಚಾರಿಗಳಾಗಬೇಕು ಎಂದು ಅರ್ಥವಲ್ಲ. ಸಂಪ್ರದಾಯವನ್ನು ಮೀರಿ ಬೆಳೆದವನು ಸಂಪ್ರದಾಯದಲ್ಲಿದ್ದರೂ, ಅವನ ವ್ಯಕ್ತಿತ್ವ ಸಂಪ್ರದಾಯವನ್ನು ಮೀರಿ ಬೆಳೆದಿರುತ್ತದೆ. ಅವನು ಸಂಪ್ರದಾಯವನ್ನು ಪಾಲಿಸುತ್ತಾನೆ, ಆದರೆ ಸಂಪ್ರದಾಯದಲ್ಲಿ ಸೀಮಿತನಾಗಿರುವುದಿಲ್ಲ. ಪ್ರಾರಂಭದಲ್ಲಿ ಶಾಸ್ತ್ರಗಳ ವಿಧಿನಿಷೇಧಗಳಿಗೆ ಅನುಸಾರವಾಗಿ ಅವನು ಬಾಳುತ್ತಾನೆ; ಶಾಸ್ತ್ರಗಳು ಅವನಿಗೆ ಪ್ರಮಾಣವಾಗಿರುತ್ತವೆ, ಅನಂತರ ಅವನೇ ಶಾಸ್ತ್ರಗಳ ಪ್ರಮಾಣವಾಗಿಬಿಡುತ್ತಾನೆ. ಶ್ರೀಕೃಷ್ಣ ಗೀತೆಯಲ್ಲಿ ಹೀಗೆ ಹೇಳುತ್ತಾನೆ:

**ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ। ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ॥** (೧೬ : ೨೪)

"ಆದುದರಿಂದ ಕಾರ್ಯ, ಅಕಾರ್ಯ – ಇವುಗಳ ನಿರ್ಧಾರಣೆಯಲ್ಲಿ ಶಾಸ್ತ್ರವೇ ನಿನಗೆ ಪ್ರಮಾಣ. ಶಾಸ್ತ್ರವಿಧಿಯಲ್ಲಿ ಹೇಳಿರುವುದನ್ನು ಅರಿತುಕೊಂಡು ಇಲ್ಲಿ ಕರ್ಮವನ್ನು ಮಾಡಬೇಕು" ಈ ವಿಷಯದಲ್ಲಿ ವಿವೇಕಾನಂದರು ಹೇಳುತ್ತಾರೆ, "ಶಾಸ್ತ್ರಕ್ಕೆ ಅತೀತರಾಗಿ ಹೋಗುವ ಶಕ್ತಿ ಬರುವ ತನಕ ಶಾಸ್ತ್ರವನ್ನು ಅನುಸರಿಸಿ. ಅನಂತರ ಅದಕ್ಕೂ ಅತೀತರಾಗಿ. ಗ್ರಂಥವೇ ಪರಮಾವಧಿಯಲ್ಲ. ಧಾರ್ಮಿಕ ಸತ್ಯದ ಏಕಮಾತ್ರ ಪ್ರಮಾಣವೇ ಆ ಅನುಭವ ನನಗೆ ಪ್ರಾಪ್ತವಾಗಿದೆಯೇ ಎಂದು ಪರೀಕ್ಷಿಸಿಕೊಳ್ಳುವುದು " (ಕೃತಿಶ್ರೇಣಿ, ೧: ೨೫೯).

ಆದರೆ **ನಿಸ್ತ್ರೈಗುಣ್ಯೇ ಪಥಿ ವಿಚರತಃ ಕೋ ವಿಧಿಃ ಕೋ ನಿಷೇಧಃ** – "ತ್ರಿಗುಣಾತೀತರಾದರಿಗೆ ವಿಧಿ ನಿಷೇಧಗಳಿಲ್ಲ" ಎನ್ನುತ್ತಾರೆ ಶುಕಮುನಿಗಳು. ಆದರೂ ಎಲ್ಲಿಯವರೆಗೆ ಇಂಥವರು ಜನಸಾಮಾನ್ಯರ ನಡುವೆ ವಾಸಿಸಿರುತ್ತಾರೋ, ಅಲ್ಲಿಯವರೆಗೆ ಆ ಜನರಿಗೆ ಮಾರ್ಗದರ್ಶಕರಾಗಿ ಶಾಸ್ತ್ರೋಕ್ತವಾಗಿಯೇ ಅವರು ಜೀವನ ನಡೆಸುತ್ತಾರೆ. ಅದಕ್ಕಾಗಿಯೇ ನಾರದರು ತಮ್ಮ ಭಕ್ತಿಸೂತ್ರಗಳಲ್ಲಿ, **ಭವತು ನಿಶ್ಚಯದಾರ್ಢ್ಯಾದೂರ್ಧ್ವಂ ಶಾಸ್ತ್ರರಕ್ಷಣಮ್** – "ನಿಶ್ಚಯವು ಧೃಢವಾದ ನಂತರವೂ ಶಾಸ್ತ್ರವನ್ನು ರಕ್ಷಿಸಬೇಕು" (ಸೂ.೧೨) ಎನ್ನುತ್ತಾರೆ. ಭಗವತ್ಸಾಕ್ಷಾತ್ಕಾರದಲ್ಲಿ ದೃಢವಾಗಿ ನೆಲೆನಿಂತ ಮೇಲೂ, ಶಾಸ್ತ್ರಾನುಸರಣೆಯ ಆವಶ್ಯಕತೆ ಇಲ್ಲದಿದ್ದರೂ, ಸಾಮಾನ್ಯ ಜನರು ಶಾಸ್ತ್ರದಲ್ಲಿ ಶ್ರದ್ಧೆ ಕಳೆದುಕೊಂಡು ಹಾಳಾಗದಿರಲೆಂಬ ಉದ್ದೇಶದಿಂದ ಶಾಸ್ತ್ರಗಳ ಅನುಸಾರವಾಗಿಯೇ ಜ್ಞಾನಿಗಳು ಜೀವನ ನಡೆಸುತ್ತಾರೆ. ಶಾಸ್ತ್ರವನ್ನು ಗೌರವಿಸಿ ಅದಕ್ಕನುಸಾರವಾಗಿಯೇ ವರ್ತಿಸಬೇಕು. ಅಂಥ ಸ್ಥಿತಿಯಲ್ಲಿರುವ ಜ್ಞಾನಿಗೆ ಶಾಸ್ತ್ರಗಳು ಪ್ರಮಾಣವಲ್ಲ; ಅವನೇ ಶಾಸ್ತ್ರಗಳಿಗೆ ಪ್ರಮಾಣ; ಅವನ ನಡೆನುಡಿಗಳೇ ಶಾಸ್ತ್ರ. ಆದ್ದರಿಂದಲೇ ಶ್ರೀಕೃಷ್ಣನು ಹೇಳುತ್ತಾನೆ,

**ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ। ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥** ( ೩ : ೨೧)

"ಶ್ರೇಷ್ಠನಾದ ಪುರುಷನು ಯಾವ ರೀತಿ ಆಚರಿಸುತ್ತಾನೆಯೋ, ಅದನ್ನೇ ಇತರ ಜನರೂ ಆಚರಿಸುತ್ತಾರೆ. ಅವನು ಯಾವುದನ್ನು ಪ್ರಮಾಣವಾಗಿ ಮಾಡುತ್ತಾನೋ, ಅದನ್ನೇ ಲೋಕವೂ ಅನುಸರಿಸುತ್ತದೆ."

ಒಬ್ಬ ವ್ಯಕ್ತಿಯು ಅಮೆಜಾನ್ ನದಿಯನ್ನು ನೋಡಿ, ಅದಕ್ಕೆ ಸಂಬಂಧಿಸಿದ ಅದ್ಭುತಗಳನ್ನೆಲ್ಲ ಅನುಭವಿಸಿ ಹಿಂದಿರುಗಿದನು. ಜನರು ಆ ನದಿಯ ಬಗ್ಗೆ ತಿಳಿದುಕೊಳ್ಳಲು ಅವನ ಸುತ್ತ ನೆರೆದರು. ಆದರೆ ತಾನು ಅನುಭವಿಸಿದುದನ್ನೆಲ್ಲ ಅವರಿಗೆ ವಿವರಿಸಿ ಹೇಳಲು ಅವನಿಗೆ ಹೇಗೆ ತಾನೇ ಸಾಧ್ಯ? ಆದರೆ ಅವರು ಬಿಡುತ್ತಿಲ್ಲ. "ನೀವೇ ಹೋಗಿ ನೋಡಿಕೊಂಡು ಬನ್ನಿ" ಎಂದು ಎಷ್ಟೇ ಹೇಳಿದರೂ ಅವರು ಕೇಳಲಿಲ್ಲ. ಕೊನೆಗೆ ಅಮೆಜಾನ್ ನದಿಯ ಒಂದು ನಕ್ಷೆಯನ್ನು ಬರೆದುಕೊಟ್ಟನು. ಅವರು ಅದನ್ನು ತೆಗೆದುಕೊಂಡು ಹೋಗಿ, ಅದಕ್ಕೆ ಒಂದು ಚೌಕಟ್ಟನ್ನು ಹಾಕಿಸಿದರು, ಅನೇಕ ಪ್ರತಿಗಳನ್ನು ಮಾಡಿ ಇತರರಿಗೆ ಹಂಚಿದರು, ಅದರ ಮೇಲೆ ವ್ಯಾಖ್ಯಾನ ಮಾಡಿದರು ಮತ್ತು ಪುಸ್ತಕಗಳನ್ನು ಕೂಡ ಬರೆದರು. ಹೀಗೆ ಅವರು ನದಿಯ ಬಗ್ಗೆ ತಮಗೆ ಎಲ್ಲಾ ತಿಳಿದಿದೆ ಎಂದು ಭಾವಿಸಿದರು. ಶಾಸ್ತ್ರವಾಸನೆಯೂ ಇದೇ ರೀತಿಯೇ. ಶಾಸ್ತ್ರಾಧ್ಯಯನ ವ್ಯಾಖ್ಯಾನಾದಿಗಳೇ ಪ್ರಧಾನವಾಗಿ ಅದರಲ್ಲಿ ಹೇಳಿರುವ ಸತ್ಯವನ್ನು ಅನುಭವಿಸಬೇಕು ಎಂಬ ಮುಖ್ಯ ವಿಷಯವನ್ನು ನಾವು ಮರೆತುಬಿಡುತ್ತೇವೆ. ನದಿಯನ್ನು ನೋಡಿದವನಿಗೆ ನಕ್ಷೆಯ ಅವಶ್ಯಕತೆ ಇರುವುದಿಲ್ಲ. ಹಾಗೆಯೇ ದೇವರನ್ನು ನೋಡಿದವನಿಗೆ ಶಾಸ್ತ್ರಗಳ ಆವಶ್ಯಕತೆ ಇರುವುದಿಲ್ಲ.

**"ಯಾರು ಈ ಭಗವತ್ಪ್ರೇಮವನ್ನು ಅನುಭವಿಸುವರೋ ಅವರಿಂದ ಆಕಾರಗಳು ಜಾರುವುವು, ಕರ್ಮಗಳು ಮಾಯವಾಗುವುವು; ಅವರು ಶಾಸ್ತ್ರಗಳನ್ನು ಅತಿಕ್ರಮಿಸಿ ಹೋಗುವರು; ವಿಗ್ರಹ ದೇವಸ್ಥಾನ ಚರ್ಚು ಧರ್ಮ ಪಂಗಡ ದೇಶ ಜನಾಂಗಗಳೆಂಬ ಅಲ್ಪಭಾವನೆಗಳು ಅವರಿಂದ ತಾವಾಗಿಯೇ ಕಳಚಿ ಹೋಗುವುವು. ಅವರನ್ನು ಬಂಧಿಸುವುದಕ್ಕೆ, ಅವರ ಸ್ವಾತಂತ್ರ್ಯಕ್ಕೆ ಚ್ಯುತಿ ತರುವುದಕ್ಕೆ ಮತ್ತೇನೂ ಉಳಿದಿರುವುದಿಲ್ಲ. ಹಡಗು ಇದ್ದಕ್ಕಿದ್ದಂತೆಯೇ ಸಾಗರದ ಅಡಿಯಲ್ಲಿರುವ ಒಂದು ಅಯಸ್ಕಾಂತದ ಗುಡ್ಡದ ಹತ್ತಿರ ಬರುತ್ತದೆ. ಆಗ ಅದರ ಕಬ್ಬಿಣದ ಮೊಳೆಪಟ್ಟಿಗಳೆಲ್ಲ ಅಯಸ್ಕಾಂತದ ಆಕರ್ಷಣೆಗೆ ಒಳಗಾಗಿ ಹೊರಗೆ ಬರುತ್ತವೆ. ಸೇರಿಸಿದ ಹಲಗೆಯೆಲ್ಲ ಸಡಿಲವಾಗಿ ಸ್ವಚ್ಛಂದದಿಂದ ನೀರಿನ ಮೇಲೇ ತೇಲುತ್ತವೆ. ಭಗವಂತನ ಕೃಪೆ ಜೀವಿಯನ್ನು ಬಿಗಿದ ಬಂಧನಗಳನ್ನೆಲ್ಲ ಹೀಗೆ ಸಡಿಲಿಸುವುದು. ಜೀವಿಯು ಮುಕ್ತನಾಗಿ ತೇಲುವನು" (ಕೃತಿಶ್ರೇಣಿ ೧: ೨೨೩).**



# ಶ್ರೀರಾಮಕೃಷ್ಣ ಶಿಷ್ಯೋದ್ಯಾನ - ಪುಷ್ಪ ೧೧

## ಸ್ವಾಮಿ ತ್ರಿಗುಣಾತೀತಾನಂದ

ಡಾ. ಕೆ. ಅನಂತರಾಮು

ಶ್ರೀರಾಮಕೃಷ್ಣರ ಹೂದೋಟಕ್ಕೆ ಸ್ವಾಮಿ ತ್ರಿಗುಣಾತೀತಾನಂದರು ಒಂದು ಕಾಡುಮಲ್ಲಿಗೆಯಿದ್ದಂತೆ. ಆ ಮತಪರಂಪರೆಯಲ್ಲಿ ಅವರೊಬ್ಬ ವಿಲಕ್ಷಣಪುರುಷರೆಂಬ ಹಿರಿಮೆಗೆ ಪಾತ್ರರಾಗಿದ್ದಾರೆ. ಹತ್ತುಜನರು ಮಾಡುವ ಕೆಲಸವನ್ನು ಒಬ್ಬರೇ ಮಾಡಬೇಕೇ, ಹತ್ತುಜನರ ಅನ್ನವನ್ನು ಒಬ್ಬರೇ ಉಂಡು ಅರಗಿಸಿಕೊಳ್ಳಬೇಕೇ, ಸಾವಿರಾರು ಮೈಲಿಗಳ ಹಾದಿಯನ್ನು ಪಾದಯಾತ್ರೆಯಿಂದಲೇ ಸವೆಸಬೇಕೇ, ಪ್ರಾಣಾಪಾಯವಿರುವ ಸ್ಥಳಗಳಿಗೆ ನುಗ್ಗಿ ಗೆದ್ದುಬರಬೇಕೇ, ಅಮೇರಿಕದಲ್ಲಿ ಪರಮಹಂಸರ ದೇವಾಲಯವನ್ನು ಕಟ್ಟಬೇಕೇ, ಅಲ್ಲಿಯೇ ವೀರಮರಣವನ್ನಪ್ಪಿ ಸ್ಮಾರಕವೊಂದನ್ನು ಕಟ್ಟಿಸಿಕೊಳ್ಳಬೇಕೇ– ಇವೆಲ್ಲಕ್ಕೂ ತಮ್ಮನ್ನು ಒಡ್ಡಿಕೊಂಡು ಅಮರರಾದವರೆಂದರೆ ತ್ರಿಗುಣಾತೀತಾನಂದರು. ಸತ್ವ, ರಜಸ್ಸು, ತಮಸ್ಸು ಎಂಬ ತ್ರಿಗುಣಗಳಿಗೆ ಅತೀತನಾದವನಿಗಲ್ಲವೇ ಈ ಬಗೆಯ ಧೀಮಂತಜೀವನ!

**ಬಂಗಾರದ ಜೀವನ:** ಸ್ವಾಮಿ ತ್ರಿಗುಣಾತೀತರು ಪಶ್ಚಿಮಬಂಗಾಳದ ಇಪ್ಪತ್ನಾಲ್ಕು ಪರಗಣ ಎಂಬ ಜಿಲ್ಲೆಗೆ ಸೇರಿದ ಪೈಖತಿ ಎಂದೂ ಕರೆಯಲಾಗುವ ನೋರಾ ಎಂಬ ಗ್ರಾಮದಲ್ಲಿ ೧೮೬೫ ಜನವರಿ ೩೦ ರಂದು ಜನಿಸಿದರು. ಅವರ ತಂದೆ ಶಿವಕೃಷ್ಣಮಿತ್ರರು ಜೋಯಿಸರನ್ನು ಬರಮಾಡಿಕೊಂಡು ಮಗನಿಗೆ ಶಾರದಾ ಪ್ರಸನ್ನಮಿತ್ರ ಎಂದು ನಾಮಕರಣ ಮಾಡಿಸಿದರು. ಆಗಲೇ ಜಾತಕವನ್ನು ಬರೆದ ಜೋಯಿಸರು "ಮುಂದೆ ಈತನು ಮಹಾಜ್ಞಾನಿಯೂ ಯೋಗಿಯೂ ಆಗಿ ಪ್ರಖ್ಯಾತನಾಗುತ್ತಾನೆ" ಎಂದು ನಿವೃತ್ತಿಮಾರ್ಗದ ಭವಿಷ್ಯವನ್ನು ನುಡಿದುಬಿಟ್ಟರು. ಶಿವಕೃಷ್ಣರು ಶ್ರೀಮಂತ ಜಮೀನುದಾರರಾಗಿದ್ದು, ತಮ್ಮ ಮಗನಿಗೆ ಮೂರುವರ್ಷ ತುಂಬುವ ವೇಳೆಗೆ, ತಮ್ಮ ಸಂಸಾರವನ್ನು ಪೈಖತಿಯಿಂದ ಕೊಲ್ಕತ್ತದ ನಂದನ್‌ಬಾಗ್ ಎಂಬಲ್ಲಿಗೆ ವರ್ಗಾಯಿಸಿಕೊಂಡರು. ಮನೆಯಲ್ಲಿ ಭಕ್ತಿಮಯ ವಾತಾವರಣವಿದ್ದುದರಿಂದ ತ್ರಿಗುಣಾತೀತರು ಬಾಲ್ಯದಿಂದಲೇ ಶ್ಲೋಕಗಳನ್ನು ಪಠಿಸುತ್ತ, ಭಜನೆಗಳನ್ನು ಹಾಡುತ್ತ, ಪುಣ್ಯಗ್ರಂಥಗಳನ್ನು ಪಾರಾಯಣಮಾಡುತ್ತ ಬೆಳೆದು ದೊಡ್ಡವರಾದರು.

ತ್ರಿಗುಣಾತೀತರು ಕೊಲ್ಕತೆಯ ಮೆಟ್ರೋಪಾಲಿಟನ್ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಯಾಗಿ ಮುಂದುವರಿಯುತ್ತಿದ್ದರು. ಆ ಹೊತ್ತಿನಲ್ಲಿ 'ಶ್ರೀರಾಮಕೃಷ್ಣ ವಚನವೇದ'ದ ಕರ್ತೃಗಳಾದ ಮಾಸ್ಟರ್ ಮಹಾಶಯರು ಆ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದುದು ಒಂದು ಯೋಗಾಯೋಗವೆಂದೇ ಹೇಳಬೇಕು. ಸಿರಿವಂತರಾಗಿದ್ದುದರಿಂದ ತ್ರಿಗುಣಾತೀತರು ಬಂಗಾರದ ಕೈಗಡಿಯಾರವನ್ನೇ ಕಟ್ಟಿಕೊಂಡು ತಿರುಗುತ್ತಿದ್ದರು. ಎಂಟ್ರೆನ್ಸ್ ಪರೀಕ್ಷೆಗೆ ಬರೆಯುತ್ತಿದ್ದಾಗ, ಹೇಗೋ ಏನೋ ಆ ಗಡಿಯಾರವನ್ನು ಉಪಾಹಾರದ ವೇಳೆಯಲ್ಲಿ ಯಾರೋ ಕದ್ದುಬಿಟ್ಟರು. " 'ಅಮೂಲ್ಯ ವಸ್ತು'ವನ್ನು ನಾನು ನನ್ನ ಅಜಾಗರೂಕತೆಯಿಂದ ಕಳೆದುಕೊಂಡುಬಿಟ್ಟೆನಲ್ಲಾ" ಎಂದು ತ್ರಿಗುಣಾತೀತರು ಅಪಾರವಾದ ದುಃಖಕ್ಕೆ ತುತ್ತಾಗಿ, ಪರೀಕ್ಷೆಗೂ ಸರಿಯಾಗಿ ಬರೆಯಲಾಗದೆ ಅನುತ್ತೀರ್ಣರಾಗಿಬಿಟ್ಟರು.

**ದಕ್ಷಿಣೇಶ್ವರದಲ್ಲಿ ದುಃಖೋಪಶಮನ:** ತಮ್ಮ ವಿದ್ಯಾರ್ಥಿಯ ಖಿನ್ನತೆಯನ್ನು ಗಮನಿಸಿದ ಮಾಸ್ಟರ್‌ಮಹಾಶಯ ಅಥವಾ ಮಹೇಂದ್ರನಾಥಗುಪ್ತರೇ ತಮ್ಮ ಶಿಷ್ಯನನ್ನು ಪರಮಹಂಸರ ಸನ್ನಿಧಾನಕ್ಕೆ ಕರೆದುಕೊಂಡು ಹೋದರು. ಆ ಹೊತ್ತಿನಲ್ಲಿ ಆ ಸದ್ಗುರುನಾಥರು ಭಕ್ತರ ನಡುವೆ ಕುಳಿತು ಮಾನವಜೀವಿತದ ಕೆಲವು ಗಹನವಾದ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತಿದ್ದರು. "ಯಾರು ದೇವರನ್ನು ಪಡೆಯಲು ಅಪೇಕ್ಷಿಸುತ್ತಾರೋ ಅವರು ನೇರವಾಗಿ ದೇವರಲ್ಲಿ ಮುಳುಗುತ್ತಾರೆ. ತಮ್ಮ ದೇಹವನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬುದರ ಬಗ್ಗೆ ಅವರು ಚಿಂತಿಸುವುದಿಲ್ಲ. ದೇವರನ್ನು ಗ್ರಹಿಸುವುದು ಶುದ್ಧಮನಸ್ಸೇ ಹೊರತು ಈ ಸಾಧಾರಣ ಮನಸ್ಸು ಆಗ ಕೆಲಸ ಮಾಡುವುದೇ ಇಲ್ಲ" ಎಂದು ಮುಂತಾಗಿ ಅವರು ಬೋಧಿಸುತ್ತಿದ್ದರು. ಬಂಗಾರದ ಗಡಿಯಾರಕ್ಕೂ ಪರಮಹಂಸರ ಆ ಹೊತ್ತಿನ ವಚನಾಮೃತಕ್ಕೂ ನೇರವಾದ ಸಂಬಂಧವಿರಲಿಲ್ಲವಾದರೂ ಅದು ತ್ರಿಗುಣಾತೀತರ ಮೇಲೆ ಅಪೂರ್ವವಾದ ಪ್ರಭಾವವನ್ನು ಬೀರಿತು. ಬಂಗಾರದ ಕೈಗಡಿಯಾರಕ್ಕಿಂತಲೂ ಹೆಚ್ಚು ಬೆಲೆಬಾಳುವ ಬಂಗಾರಮಯ ಜೀವನವೊಂದಿದೆ ಎಂಬ ಸತ್ಯವು ಆ ಕ್ಷಣದಲ್ಲಿಯೇ ಅವರಿಗೆ ಮನವರಿಕೆಯಾಗಿಬಿಟ್ಟಿತು. ಪರಮಹಂಸರ ಪ್ರಥಮ ಸಂದರ್ಶನದಲ್ಲಿಯೇ ತ್ರಿಗುಣಾತೀತರು ತಮ್ಮ ಲೌಕಿಕ ದುಃಖವನ್ನು ನೀಗಿಕೊಂಡು, ಪರಮಾತ್ಮನತ್ತ ಮುಖಮಾಡಿಬಿಟ್ಟರು.

ತ್ರಿಗುಣಾತೀತರು ತಮ್ಮ ಶಾಲೆಯ ವಿದ್ಯಾಭ್ಯಾಸವನ್ನು ಮುಂದುವರಿಸಿದರಾದರೂ ಪರಮಹಂಸರ ಸಾನ್ನಿಧ್ಯದಿಂದ ವಂಚಿತರಾಗುವುದು ಸಾಧ್ಯವಾಗಲಿಲ್ಲ. ತರಗತಿಗಳಿಗೆ ತಪ್ಪಿಸಿಕೊಂಡು ದಕ್ಷಿಣೇಶ್ವರಕ್ಕೆ ಹೋಗಿಬಿಡುತ್ತಿದ್ದರು. ಒಂದುದಿನ ಲೈಂಗಿಕ ಹಸಿವು ಎಂಬ ಮಹಾಶತ್ರುವನ್ನು ಜಯಿಸುವ ಬಗೆ ಹೇಗೆ ಎಂದು ಕಳವಳತುಂಬಿದ ಹೃದಯದಿಂದ ತ್ರಿಗುಣಾತೀತರು ಧ್ಯಾನಮಗ್ನರಾಗಿ

ಕುಳಿತಿರುವಾಗ, ಒಳಗೊಳಗೇ ತಮ್ಮ ಲೈಂಗಿಕಹಸಿವನ್ನು ಪರಮಹಂಸರು ಕಿತ್ತುಹಾಕಿದರೆಂಬ ಅಪೂರ್ವವಾದ ಅನುಭವ ವುಂಟಾಯಿತು. ಅದೊಂದು ಮೃಗಮರೀಚಿಕೆಯೆಂಬಂತೆ, ಎಂದೆಂದಿಗೂ ಆಕ್ರಮಿಸದಂತೆ ಅದೃಶ್ಯವಾಗಿಬಿಟ್ಟಿತು.

**ವೈರಾಗ್ಯವಿಮುಖರಾಗಿಸಲು ಯತ್ನಗಳು :** ಪರಮಹಂಸರು ಕಾಶೀಪುರದ ತೋಟದಮನೆಯಲ್ಲಿ ಕ್ಯಾನ್ಸರ್‌ಗಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ತ್ರಿಗುಣಾತೀತರೂ ಅವರೊಡನೆ ಇರುತ್ತಾ, ಅವರ ಸೇವೆಯಲ್ಲಿ ತತ್ಪರರಾದರು. ತಮ್ಮ ಮಗನನ್ನು ವೈರಾಗ್ಯವಿಮುಖರಾಗಿಸಲು ತ್ರಿಗುಣಾತೀತರ ತಂದೆತಾಯಿಗಳು ವಿವಾಹದ ಏರ್ಪಾಟು ಮಾಡಿಬಿಟ್ಟರು. ಆ ವಿಚಾರ ತಿಳಿದೊಡನೆಯೆ ತ್ರಿಗುಣಾತೀತರು, "ಮಾಯಾ ಜಾಲದಲ್ಲಿ ಸಿಕ್ಕಿಬೀಳಲು ನನಗೆ ಇಷ್ಟವಿಲ್ಲ" ಎಂದು ಪತ್ರಬರೆದಿಟ್ಟು, ಪರಮಹಂಸರ ಅಪ್ಪಣೆಪಡೆದು ಮುನ್ನೂರು ಮೈಲಿಗಳ ಯಾತ್ರೆ ಯನ್ನು ಕಾಲ್ನಡಗೆಯಲ್ಲಿಯೇ ಮುಗಿಸುತ್ತ ಜಗನ್ನಾಥಪುರಿಗೆ ಹೊರಟುಹೋದರು. ವಿಷಯ ತಿಳಿದಬಳಿಕ ತಂದೆತಾಯಿಗಳು ತಾವೇ ಪುರಿಕ್ಷೇತ್ರಕ್ಕೆ ಹೋಗಿ, ಹೇಗೋ ಮನವೊಲಿಸಿ ಮನೆಗೆ ಕರೆತಂದು ಕಾಲೇಜುವಿದ್ಯಾಭ್ಯಾಸಕ್ಕೆ ಹಚ್ಚಿದರು. ಅವರು ಜೋಯಿಸರ ಭವಿಷ್ಯವಾಣಿಯನ್ನು ಮರೆತುಕುಳಿತಿದ್ದರು.

"ಈ ಪರಮಹಂಸನೆಂಬ ಪುರುಷನು ಸತ್ತುಹೋದರೆ ಸಾಕು, ನನ್ನ ಮಗ ನನ್ನ ಕೈಸೇರುತ್ತಾನೆ"ಎಂದು ಶಿವಕೃಷ್ಣರು ಕಾಳಿಘಾಟಿನಲ್ಲಿ ಕುಳಿತು ಅದೆಷ್ಟೋ ಕಾಲಕ್ರಮವಾಗಿ ಮಂತ್ರೋಚ್ಚಾರಣೆ ಮಾಡಿದರು. ೧೮೮೬, ಆಗಸ್ಟ್ ೧೬ ರಂದು ಪರಮಹಂಸರು ಮುಕ್ತರಾದಾಗ "ನನ್ನ ತಪಸ್ಸಿಗೆ ಫಲ ಸಿಕ್ಕಿತು, ಇನ್ನು ನನ್ನ ಮಗ ನನ್ನವನಾಗುತ್ತಾನೆ" ಎಂದು ಹಿಗ್ಗಿದರು. ಆದರೆ ಅವರು ನಿರೀಕ್ಷಿಸಿದ್ದಂತೆ ಏನೂ ಆಗಲಿಲ್ಲ. ಆಮೇಲೆ ತ್ರಿಗುಣಾತೀತರ ಅಣ್ಣ ವಿನಯಮಿತ್ರನು ತನ್ನ ಸೋದರನನ್ನು ವೈರಾಗ್ಯವಿಮುಖನನ್ನಾಗಿಸಲು ದೊಡ್ಡದೊಂದು ಹೋಮವನ್ನೇ ಗುಟ್ಟಾಗಿ ಮಾಡಿಸಿದನು. ಹನ್ನೆರಡು ಜನ ಬ್ರಾಹ್ಮಣರು, ನಲವತ್ತೆರಡು ದಿನ ಅದಕ್ಕಾಗಿ ಹೆಣಗಿದರು. ಆ ಕಾಲಕ್ಕೇ ಎರಡುಸಾವಿರ ಕೈಬಿಟ್ಟಿತ್ತು. ಪೂರ್ಣಾಹುತಿಯ ಬಳಿಕ ಋತ್ವಿಜರು, "ಶುದ್ಧಾತ್ಮನನ್ನು ಕೆಳಕ್ಕೆಳೆಯುವಲ್ಲಿ ನಾವು ಮಾಡಿದ ಯಜ್ಞವು ವಿಫಲವಾಗಿದೆ" ಎಂದು ಘೋಷಿಸಿ ಕೈತೊಳೆದುಕೊಂಡರು. ಈ ಘಟನೆಗಳಿಂದುಂಟಾದ ಜುಗುಪ್ಸೆಯಿಂದ ತ್ರಿಗುಣಾತೀತರು ಮನೆಗೆ ಹೋಗುವುದನ್ನೇ ನಿಲ್ಲಿಸಿಬಿಟ್ಟರು.

೧೮೮೭ರ ಜನವರಿಯಲ್ಲಿ ತ್ರಿಗುಣಾತೀತರು ಶ್ರೀರಾಮಕೃಷ್ಣರ ಭಾವಚಿತ್ರವನ್ನು ಮುಂದಿಟ್ಟುಕೊಂಡು, ವಿವೇಕಾನಂದರ ಸಾರಥ್ಯದಲ್ಲಿ ವಿರಜಾಹೋಮ ಮಾಡಿಕೊಂಡು ಅವರಿಂದಲೇ ಆಶ್ರಮನಾಮವನ್ನು ಪಡೆದುಕೊಂಡರು. ಆಗತಾನೇ ಪ್ರಾರಂಭವಾಗಿದ್ದ ವರಾಹನಗರದ ಮಠದಲ್ಲಿದ್ದುಕೊಂಡು ತಮ್ಮ ತಪೋಮಯ ಜೀವನವನ್ನು ಮುಂದುವರಿಸಿದರು. ಅತ್ಯಂತ ವ್ಯಾಪಕವಾಗಿ ದೇಶಾಟನೆಯನ್ನು ಕೈಗೊಂಡು ಹಿಮಾಲಯದ ದಿವ್ಯಧಾಮಗಳನ್ನು ಸಂದರ್ಶಿಸಿದರು. ಅಷ್ಟು ಮಾತ್ರವಲ್ಲದೆ ಅತ್ಯಂತ ಕಠಿಣವಾದ ಕೈಲಾಸಮಾನಸಸರೋವರ ಯಾತ್ರೆಯನ್ನು ಕೂಡ ಅತ್ಯಂತ ಯಶಸ್ವಿಯಾಗಿ ಮುಗಿಸಿಕೊಂಡು ಬಂದರು. ತಮ್ಮ ಟಿಬೆಟ್‌ಯಾತ್ರೆಯ ಅನುಭವಗಳನ್ನು ಕುರಿತು ಆಗ ಲೇಖನಗಳನ್ನೂ ಬರೆದರು.

**ಭೀಮಸೇನನ ಅಪರಾವತಾರ:** ತ್ರಿಗುಣಾತೀತರು ವಿಲಕ್ಷಣಪುರುಷರಾಗಿದ್ದರು. ಹಲವು ದಿನಗಳು ಆಹಾರವಿಲ್ಲದೆ ಇರಬಲ್ಲವ ರಾಗಿದ್ದರು. ಊಟಮಾಡಲು ಕುಳಿತರೆ ಹತ್ತುಜನರ ಅನ್ನವನ್ನು ಒಬ್ಬರೇ ಉಂಡುಮುಗಿಸುವ ಅಪಾರ ಸಾಮರ್ಥ್ಯವನ್ನು ಸಿದ್ಧಿಸಿಕೊಂಡಿದ್ದರು. ಒಮ್ಮೆ ಪ್ರೇಮಾನಂದರು ಏಳೂವರೆಸೇರು ಹಾಲನ್ನು ಇಂಗಿಸಿ ಪಾಯಸಮಾಡಿ ಅದನ್ನೆಲ್ಲ ತ್ರಿಗುಣಾತೀತರೊಬ್ಬರಿಗೇ ಬಡಿಸಿದರು. ಅವರು ಸ್ವಲ್ಪವನ್ನೂ ಉಳಿಸದೆ ಎಲ್ಲವನ್ನೂ ಅನಾಯಾಸವಾಗಿ ತಿಂದುಮುಗಿಸಿದರು. ಇನ್ನೊಮ್ಮೆ ಬಲರಾಮಬಸು ಅವರ ಮನೆಯಲ್ಲಿ ನಾಲ್ಕುಜನರ ಊಟವನ್ನು ತ್ರಿಗುಣಾತೀತರೊಬ್ಬರೇ ಉಂಡುಮುಗಿಸಿದಾಗ ಪ್ರೇಮಾನಂದರ ತಾಯಿ, "ಈ ಹುಡುಗ ನಾಳೆ ಏನಾಗುತ್ತಾನೋ" ಎಂದು ನಡುಗಿಹೋದರು. ಆದರೆ ಮರುದಿನವೂ ತ್ರಿಗುಣಾತೀತರು ಆರೋಗ್ಯವಾಗಿಯೇ ಇದ್ದುದನ್ನು ಕಂಡು ಆಕೆ "ಶಾರದನು ತಿನ್ನುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅವನು ಅನೇಕ ಪರ್ವತಗಳನ್ನೇರಿ, ಅನೇಕ ಮಂತ್ರಗಳನ್ನು ಕಲಿತಿದ್ದಾನೆಂದು ತೋರುತ್ತದೆ. ಅದಕ್ಕೇ ಅವನು ಅನ್ನದ ಬೆಟ್ಟಗಳನ್ನೇ ಕರಗಿಸಿಬಿಡುತ್ತಾನೆ. ಹಾಗಲ್ಲದಿದ್ದರೆ ಮನುಷ್ಯಮಾತ್ರದವರಿಂದ ಅಷ್ಟೊಂದು ತಿನ್ನುವುದು ಸಾಧ್ಯವೇ?!" ಎಂದು ಉದ್ಗರಿಸಿದರು. ಮತ್ತೊಮ್ಮೆ ತ್ರಿಗುಣಾತೀತರು ಚಳಿಜ್ವರಬಂದು ಗಡಗಡನೆ ನಡುಗುತ್ತಿರುವಾಗಲೇ ತಣ್ಣೀರಲ್ಲಿ ಮುಳುಗಿಬಂದು, ಬೇಕಾದಹಾಗೆ ಉಂಡುತಿಂದು, ಊಟದ ಜೊತೆಗೆ ಜ್ವರವನ್ನೂ ಜೀರ್ಣಿಸಿಕೊಂಡುಬಿಟ್ಟರು.

ಪರಿವ್ರಾಜಕರಾಗಿ ದೇಶಾಟನೆ ಮಾಡುತ್ತಿದ್ದಾಗ ತ್ರಿಗುಣಾತೀತರು ಹಲವು ದಿನಗಳು ಉಪವಾಸಬೀಳಬೇಕಾಯಿತು. ಆಮೇಲೆ ಎಲ್ಲಿಯೋ ಒಂದು ಹೋಟಲನ್ನು ಕಂಡು ಅದರೊಳಕ್ಕೆ ನುಗ್ಗಿ ತಮಗೆ ಊಟಬಡಿಸಬೇಕೆಂದೂ, ನಿಗದಿಯಾದುದಕ್ಕಿಂತ ಹೆಚ್ಚಿನ ಹಣ ವನ್ನು ಕೊಡುವುದಾಗಿಯೂ ಹೇಳಿದರು. ಇವರು ಭೀಮಸೇನನ ಅಪರಾವತಾರವೆಂದು ಅವರಿಗೇನು ಗೊತ್ತು ! ಮಾಣಿಗಳು ಬಡಿಸುತ್ತಾ ಹೋದರು, ಸ್ವಾಮಿಗಳು ಉಣ್ಣುತ್ತಾ ಹೋದರು. ಹೋಟಲಿನಲ್ಲಿದ್ದ ಶಾಕಪಾಕಗಳೆಲ್ಲ ಬರಿದಾಗಿಹೋದುವು. ಆಗ ಮಾಲೀಕನು ವಿಸ್ಮಯಾಭಿಭೂತನಾಗಿ ತ್ರಿಗುಣಾತೀತರ ಮುಂದೆ ಕೈಮುಗಿದುನಿಂತು, "ಸ್ವಾಮಿ, ನೀವು ಊಟಮಾಡಿದ್ದಕ್ಕೆ ಹಣವನ್ನೇನೂ ಕೊಡ ಬೇಕಾಗಿಲ್ಲ. ನಿಮ್ಮ ವೈಶ್ವಾನರನನ್ನು ಉಪಸಂಹರಿಸಿಕೊಂಡು ನಮ್ಮನ್ನು ಆಶೀರ್ವದಿಸಬೇಕು" ಎಂದು ಬೇಡಿಕೊಂಡನು. ಆಗ ತ್ರಿಗುಣಾತೀತರು ತೇಗುತ್ತಾ ಮೇಲೆದ್ದು ಕೈತೊಳೆದು, "ನಾವು ತೃಪ್ತರಾದೆವು, ಅನ್ನದಾತಾ ಸುಖೀಭವ" ಎಂದು ಆಶೀರ್ವದಿಸಿ ಹೊರನಡೆದರು.

**ಸಾಹಸಭೀಮವಿಜಯ :** ತ್ರಿಗುಣಾತೀತರ ತೋಳುಗಳಲ್ಲಿ ಭೀಮಬಲವಿತ್ತು. ಬಲರಾಮಬಸುವಿನ ಮನೆಯಲ್ಲಿ ಒಮ್ಮೆ ಅವರು ಐವತ್ತು ಪೌಂಡು ತೂಗುತ್ತಿದ್ದ ಸೀಮೆಣ್ಣೆಯ ಡಬ್ಬವೊಂದನ್ನು ಮೊದಲನೆಯ ಮಹಡಿಯಿಂದ ಎರಡನೆಯ ಮಹಡಿಗೆ, ತಮ್ಮ ಒಂದೇ

ಬೆರಳಿನಲ್ಲಿ ತೂಗುತ್ತಾ ಸಾಗಿಸಿಬಿಟ್ಟರು. ಕೆಲವೊಮ್ಮೆ ತಮಗೆ ಬೇಕಾದ ಪುಸ್ತಕವನ್ನು ಎತ್ತರವಾದ ಸ್ಟೂಲೊಂದರ ಮೇಲಿಟ್ಟುಕೊಂಡು ಇಡೀ ರಾತ್ರಿ ನಿಂತುಕೊಂಡೇ ಓದುತ್ತಿದ್ದರು. ವಿಷಮಪರಿಸ್ಥಿತಿಗಳಲ್ಲೂ ಅಂಜುವ ಎದೆ ಅವರದಾಗಿರಲಿಲ್ಲ. ಭೂತವೆಂಬುದು ಹೇಗಿರುತ್ತದೋ ನೋಡಬೇಕೆಂಬ ಕುತೂಹಲದಿಂದ ವರಾಹನಗರದ ಮಠದ ಸಮೀಪದಲ್ಲಿಯೇ ಇದ್ದ ಭೂತಬಂಗಲೆಯೊಂದನ್ನು ಯಾರಿಗೂ ಹೇಳದೆ ಹೊಕ್ಕು ಕುಳಿತರು. ನಡುರಾತ್ರಿಯಲ್ಲಿ ಅಲ್ಲಿ ಸಣ್ಣಬೆಳಕು ಕಾಣಿಸಿಕೊಂಡು ಅದು ಕ್ರಮಕ್ರಮವಾಗಿ ದೊಡ್ಡದಾಯಿತು. ಆಮೇಲೆ ಆ ಪ್ರಖರ ಬೆಳಕಿನ ನಡುವೆ ಕ್ರೂರವೂ ಭೀಕರವೂ ಆದ ಕಣ್ಣೊಂದು ಕಾಣಿಸಿತು. ಅದನ್ನು ಕಂಡು ತ್ರಿಗುಣಾತೀತರು ಕಾಳ್ಗಿಚ್ಚಿಗೆ ಸಿಲುಕಿದ ಬಾಳೆಯಗಿಡದಂತೆ ಬತ್ತಿಹೋದರು. ಮೂರ್ಛೆಹೋಗಿ ಬೀಳುವಷ್ಟರಲ್ಲಿ ಪರಮಹಂಸರು ಕಾಂತಿಕಾಯದಿಂದ ಪ್ರತ್ಯಕ್ಷರಾಗಿ "ಮೂರ್ಖನಾಗಿ ಹೀಗೆ ಮೃತ್ಯುವಿನೊಡನೆ ಸೆಣಸುವುದೇಕೆ" ಎಂದು ಹೇಳುತ್ತ ಕೈಹಿಡಿದೆತ್ತಿ ಕಾಪಾಡಿದರು. ಮತ್ತೊಮ್ಮೆ ಮಧ್ಯರಾತ್ರಿಯಲ್ಲಿ ಶ್ಮಶಾನಕ್ಕೆ ಹೋಗಿ ತಾಂತ್ರಿಕಸಾಧನೆ ಮಾಡಬೇಕೆಂದು ಗುಟ್ಟಾಗಿ ಹೊರಟಿದ್ದರು. ಆದರೆ ಹೇಗೋ ವಿವೇಕಾನಂದರ ಕಣ್ಣಿಗೆ ಬಿದ್ದು, ಅವರು ತ್ರಿಗುಣಾತೀತರನ್ನು ಅಂತಹ ಸಾಧನೆಗೆ ಎಂದಿಗೂ ಕೈಯಿಕ್ಕದಂತೆ ತಿಳಿಯಹೇಳಿ ಹಿಂದಕ್ಕೆ ಕರೆತಂದರು.

ತ್ರಿಗುಣಾತೀತರು ಶ್ರೀಮಾತೆಯ ಸೇವಕರಾಗಿಯೂ ಸೇವೆಸಲ್ಲಿಸಿದರು. ಒಮ್ಮೆ ಶ್ರೀಮಾತೆಯವರು ಎತ್ತಿನಗಾಡಿಯಲ್ಲಿ ಕುಳಿತು ಜಯರಾಮಬಾಟಿಗೆ ಹೋಗುತ್ತಿದ್ದರು. ಅದರ ರಕ್ಷಕರಾಗಿ ತ್ರಿಗುಣಾತೀತರು ಮುಂದೆ ನಡೆಯುತ್ತಿದ್ದರು. ಆ ದಾರಿಯಲ್ಲಿ ನೀರಿನ ಪ್ರವಾಹದಿಂದ ರಸ್ತೆಯು ಕೊಚ್ಚಿಹೋಗಿ ಕೊರಕಲೊಂದು ಉಂಟಾಗಿತ್ತು. ಅದನ್ನು ದಾಟಿಹೋಗುವಾಗ ಉಂಟಾಗುವ ಸದ್ದಿನಿಂದ ಗಾಡಿಯಲ್ಲಿ ಮಲಗಿದ್ದ ಶ್ರೀಮಾತೆಗೆ ನಿದ್ರಾಭಂಗವಾಗಬಹುದಾಗಿತ್ತು. ಆಗ ತ್ರಿಗುಣಾತೀತರು ತಮ್ಮ ಭೀಮಕಾಯವನ್ನು ಆ ಕೊರಕಲಿನಲ್ಲಿ ಮಲಗಿಸಿ, "ಹೊಡಿ ಗಾಡಿಯನ್ನು ನನ್ನ ಮೇಲೆ" ಎಂದು ಗಾಡಿಯವನಿಗೆ ಹೇಳಿದರು. ಆ ಸಡಗರಕ್ಕೆ ಶ್ರೀಮಾತೆಯವರಿಗೆ ಎಚ್ಚರವಾಗಿ "ಇದೇನಪ್ಪಾ, ಇಂತಹ ಅಪಾಯಕಾರಿ ಒಡ್ಡತನಕ್ಕೆ ಯಾರಾದರೂ ತಮ್ಮನ್ನು ಒಡ್ಡಿಕೊಳ್ಳುವುದುಂಟೆ" ಎಂದು ತರಾಟೆಗೆ ತೆಗೆದುಕೊಂಡರು.

ಶ್ರೀರಾಮಕೃಷ್ಣರ ಸಂದೇಶವನ್ನು ಜಗತ್ತಿಗೆ ಸಾರುವ ಸಲುವಾಗಿ ವಿವೇಕಾನಂದರು 'ಉದ್ಬೋಧನ'ವೆಂಬ ಬಂಗಾಳಿ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಅದರ ಹೊಣೆಗಾರಿಕೆಯನ್ನೆಲ್ಲ ತ್ರಿಗುಣಾತೀತರಿಗೆ ಹೊರಿಸಿದರು. ಆ ಕೆಲಸವನ್ನು ತ್ರಿಗುಣಾತೀತಾನಂದರು ಅತ್ಯಂತ ಸಮರ್ಥವಾಗಿ ನಿರ್ವಹಿಸಿದರು. ಲೇಖನಗಳನ್ನು ಸಂಗ್ರಹಿಸುವುದು, ಚಂದಾದಾರರನ್ನು ಕೂಡಿಸಿಕೊಳ್ಳುವುದು, ಮುದ್ರಣದ ವ್ಯವಸ್ಥೆಮಾಡುವುದು, ಕೊನೆಗೆ ಮೊಳೆಯನ್ನೂ ಮುದ್ರಣಕ್ಕಾಗಿ ಜೋಡಿಸುವುದು – ಮೊದಲಾದ ಬಹುಮುಖವಾದ ಕಾರ್ಯಗಳನ್ನು ನಿರ್ವಹಿಸುತ್ತಾ ಪತ್ರಿಕೆಯು ಯಶಸ್ವಿಯಾಗಿ ನಡೆಯುವಂತೆ ನೋಡಿಕೊಂಡರು.

**ವೇದಾಂತದ ರಾಯಭಾರಿ :** ವಿವೇಕಾನಂದರು ಮಹಾಸಮಾಧಿಯನ್ನೈದಿದಮೇಲೆ ತ್ರಿಗುಣಾತೀತರು ವೇದಾಂತದ ಪ್ರಚಾರಕ್ಕಾಗಿ ಅಮೇರಿಕೆಗೆ ೧೯೦೩ ರಲ್ಲಿ ಪ್ರಯಾಣಬೆಳೆಸಿದರು. ಸಾನ್‌ಫ್ರಾನ್ಸಿಸ್ಕೋ ನಗರವನ್ನು ತಲುಪಿ, ಅಲ್ಲಿ ವೇದಾಂತಸೊಸೈಟಿಯ ಚಟುವಟಿಕೆಗಳಿಗೆ ಪ್ರಾಣಪ್ರತಿಷ್ಠೆ ಮಾಡಿದರು. ತಮ್ಮ ಕ್ರಿಯಾಶೀಲತೆ ಮತ್ತು ಸಂಘಟನಸಾಮರ್ಥ್ಯಗಳಿಂದ ಅಲ್ಲೊಂದು ಅಪೂರ್ವವಾದ ಶ್ರೀರಾಮಕೃಷ್ಣರ ದೇವಾಲಯವನ್ನೇ ನಿರ್ಮಿಸಿ ೧೯೦೬ ರಲ್ಲಿ ಉದ್ಘಾಟಿಸಿದರು. ಅದು ಹಿಂದೂ–ಮುಸ್ಲಿಂ–ಕ್ರೈಸ್ತ ವಾಸ್ತುಶಿಲ್ಪಗಳ ಸಲ್ಲಕ್ಷಣಗಳನ್ನೆಲ್ಲ ತನ್ನಲ್ಲಿ ಅಳವಡಿಸಿಕೊಂಡ ಅಪೂರ್ವ ವಾಸ್ತುರಚನೆಯಾಗಿ ಪಾಶ್ಚಿಮಾತ್ಯ ಜಗತ್ತಿನ ಮೊತ್ತಮೊದಲ 'ಹಿಂದೂ ದೇವಾಲಯ' ವೆಂಬ ಖ್ಯಾತಿಗೆ ಪಾತ್ರವಾಯಿತು. ಇಂದಿಗೂ ಆ ದೇವಾಲಯವು ಸಾನ್‌ಫ್ರಾನ್ಸಿಸ್ಕೋ ನಗರದ ಪ್ರೇಕ್ಷಣೀಯ ಸ್ಥಳಗಳಲ್ಲೊಂದಾಗಿ ಭಾರತೀಯ ಸಂಸ್ಕೃತಿಯ ಘನತೆಯನ್ನು ಸಾರುತ್ತಿದೆ.

ತ್ರಿಗುಣಾತೀತರು ಆ ದೇವಾಲಯದಲ್ಲಿಯೇ ಒಂದು ಪುಸ್ತಕಮಳಿಗೆಯನ್ನು ತೆರೆದರು. ಅಮೇರಿಕನ್ ತರುಣರಿಗಾಗಿ ಸಂನ್ಯಾಸಿಮಠವೊಂದನ್ನು ಸ್ಥಾಪಿಸಿದರು. ಶಿಸ್ತುಬದ್ಧ ಜೀವನವನ್ನು ನಡೆಸಲು ಇಚ್ಛಿಸುವ ಮಹಿಳೆಯರಿಗಾಗಿ ಪ್ರತ್ಯೇಕ ಕಾನ್ವೆಂಟನ್ನು ಪ್ರಾರಂಭಿಸಿದರು. ೧೯೦೯ ರಲ್ಲಿ ವೇದಾಂತಸಂದೇಶವನ್ನು ವ್ಯಾಪಕವಾಗಿ ತಲುಪಿಸುವ ಸಲುವಾಗಿ 'ವಾಯ್ಸ್ ಆಫ್ ಫ್ರೀಡಂ' ಎಂಬ ಬಿಡುಗಡೆಯ ಧ್ವನಿಯಾಗುವ ಮಾಸಪತ್ರಿಕೆಯೊಂದನ್ನು ಪ್ರಾರಂಭಿಸುವಲ್ಲಿ ಯಶಸ್ವಿಯಾದರು. 'ಶ್ರೀರಾಮಕೃಷ್ಣವಚನವೇದ'ವು ಅಮೇರಿಕನ್ ಜಿಜ್ಞಾಸುಗಳ ಕೈಗೆ ತಲುಪುವ ಆಂಗ್ಲಸಂಸ್ಕರಣವೊಂದನ್ನು ಪ್ರಕಟಿಸಿದರು. ಸಾನ್‌ಫ್ರಾನ್ಸಿಸ್ಕೋಗೆ ಸಮೀಪದ ಕಾನ್‌ಕಾರ್ಡ್ ಎಂಬಲ್ಲಿ ಸಕಲಸೌಕರ್ಯಗಳಿಂದ ಕೂಡಿದ 'ವೇದಾಂತ ಕಾಲೊನಿ'ಯೊಂದನ್ನು ರೂಪುಗೊಳಿಸಿದರು. ಈ ಮೊದಲು ಸ್ವಾಮಿ ತುರೀಯಾನಂದರು ಕಟ್ಟಿಬೆಳೆಸಿದ್ದ 'ಶಾಂತಿಆಶ್ರಮ'ದ ಜವಾಬ್ದಾರಿಯನ್ನು ಹೊತ್ತು ಅದರ ಚಟುವಟಿಕೆಗಳನ್ನು ಚೆನ್ನಾಗಿ ಪೋಷಿಸಿದರು. "ಅಮೃತತ್ವದ ಸಾಗರಕ್ಕೆ ನಿಮ್ಮನ್ನು ಸೆಳೆದೊಯ್ದು, ಅದರೊಳಕ್ಕೆ ತಳ್ಳುವಮುನ್ನ, ನಿಮ್ಮ ಮೂಳೆಗಳನ್ನೆಲ್ಲ ಪುಡಿಪುಡಿ ಮಾಡಿಬಿಡುತ್ತೇನೆ, ಅಷ್ಟು ಮಾಡಿದರೆ ನನ್ನ ಕೆಲಸ ಮುಗಿಯಿತು" ಎಂದು ತಮ್ಮ ಶ್ರದ್ಧಾವಂತ ಶಿಷ್ಯರೆದುರು ಘೋಷಿಸಿದರು. ಇಂತಹ ಪುರುಷನನ್ನೇ ಉಪನಿಷತ್ತುಗಳು 'ಧೀರ' ಎಂದು ಕರೆದಿರುವುದು.

**ಅನಿರೀಕ್ಷಿತ ಅಂತ್ಯ:** ತ್ರಿಗುಣಾತೀತರು ತಮ್ಮ ಕಠೋರವಾದ ತಪಸ್ಸು ಮತ್ತು ಅವಿರತವಾದ ದುಡಿಮೆಯಿಂದ ತಮ್ಮ ನಲವತ್ತೈದನೆಯ ವಯಸ್ಸಿಗೇ ಸಂಧಿವಾತ ಮತ್ತು ಬ್ರೈಟ್ ಎಂದು ಹೇಳುವ ಮೂತ್ರಪಿಂಡದ ಕಾಯಿಲೆಗೆ ಗುರಿಯಾಗಿ ನರಳಿದರು. ಆದರೂ ತಮ್ಮ ಕರ್ಮಯೋಗವನ್ನು ಮಾತ್ರ ನಿಲ್ಲಿಸಲಿಲ್ಲ. ೧೯೧೪ರ ಡಿಸೆಂಬರ್ ೨೭ನೆಯ ಭಾನುವಾರವು ಭಕ್ತಜನರ ಪಾಲಿಗೆ ಕರಾಳ ದಿನವಾಗಿತ್ತು. ಅಂದು ಸ್ವಾಮಿಗಳು ಉಪನ್ಯಾಸ ಮಾಡುತ್ತಿದ್ದ ಹೊತ್ತಿನಲ್ಲಿ ಲೂಯಿಸ್‌ವಾಲ್ಲ ಎಂಬ ಯುವಕನು ಅವರ ಮೇಲೊಂದು ಬಾಂಬನ್ನು